SEVA BHARATHI
सेवा ही परमो धर्मः

ಸಂಚಿಕೆ : 12
ಸಂಪುಟ : 04

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e–ನ್ಯೂಸ್ ಲೆಟರ್ – ಡಿಸೆಂಬರ್ 2023

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–II, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ಸೇವಾಭಾರತಿಯ 19ನೇ ವರ್ಷದ ಸಂಭ್ರಮಾಚರಣೆ

## ಸೇವಾಧಾಮ ಪುನಶ್ಚೇತನ ಕೇಂದ್ರದ 5ನೇ ವಾರ್ಷಿಕೋತ್ಸವದ ಪ್ರಯುಕ್ತ ಬೃಹತ್ ರಕ್ತದಾನ ಶಿಬಿರ

## ಸೆಲ್ಕೋ ಕಂಪನಿಯ ಸಿ.ಇ.ಒ.ರಿಗೆ ಮನವಿ ಪತ್ರ ಸಲ್ಲಿಕೆ

## ಸಿಬ್ಬಂದಿಗಳಿಗೆ ಒಂದು ದಿನದ ಕಾರ್ಯಾಗಾರ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಕೈಹಿಡಿದ ಮೀನು ವ್ಯಾಪಾರ

ಯಶೋಗಾಥೆ

## ನಮ್ಮಿಂದಿಷ್ಟು

ನಮ್ಮ ಸಂಸ್ಥೆಯ 19ನೇ ವಾರ್ಷಿಕ ಸಂಭ್ರಮವು ನಡೆಯಿತು. Commscope ಅನ್ನುವ ಕಾರ್ಪೊರೇಟ್ ಸಂಸ್ಥೆಯಿಂದ ಅನೇಕ ಫಲಾನುಭವಿಗಳಿಗೆ ಸವಲತ್ತುಗಳು ದೊರಕಿದವು. ಸೇವಾಧಾಮಕ್ಕೂ ಬ್ಯಾಟರಿಚಾಲಿತ ಗಾಲಿಕುರ್ಚಿಯನ್ನು ಪಡೆದಿರುತ್ತೇವೆ. ಒಟ್ಟಿನಲ್ಲಿ ಸೇವಾ ಕಾರ್ಯಗಳ ಅನುಷ್ಠಾನ ನಿರಂತರವಾಗಿದೆ.

ಇದೇ ದಿನದ ಸಂದರ್ಭದಲ್ಲಿ ಸೇವಾಧಾಮಕ್ಕೆ 5ನೇ ವರುಷದ ಸಂತೋಷ. ಈ ನಿಟ್ಟಿನಲ್ಲಿ ಸೇವಾಧಾಮದಲ್ಲಿ ಮೊತ್ತ ಮೊದಲ ಬಾರಿಯಾಗಿ ಒಂದು ರಕ್ತದಾನ ಶಿಬಿರವನ್ನು ಆಯೋಜಿಸಿದ್ದೆವು. 81 ಮಂದಿ ರಕ್ತದಾನಿಗಳು ಭಾಗವಹಿಸಿದ್ದರು. ಬೇರೆ ಬೇರೆ ಸಂಘ ಸಂಸ್ಥೆಗಳ ಸಹಕಾರ ದೊರಕಿತ್ತು. ಆದರೆ ಶಿವಾಜಿ ಗ್ರೂಪ್ಸ್ ಆಫ್ ಬಾಯ್ಸ್‌ನವರು ಅತೀ ಹೆಚ್ಚು ಶ್ರಮವಹಿಸಿ ಅತ್ಯಧಿಕ ದಾನಿಗಳಿಂದ ರಕ್ತದಾನವಾಗುವಂತೆ ಪ್ರಯತ್ನಿಸಿರುವುದು ಉಲ್ಲೇಖನೀಯ ಸಂಗತಿ.

ಬೆಂಗಳೂರಿನಲ್ಲಿ ಸೆಲ್ಕೋ ಕಂಪೆನಿಯ ವತಿಯಿಂದ ನಡೆದ Symposium ಕಾರ್ಯಕ್ರಮದಲ್ಲಿ ಭಾಗವಹಿಸುವ ಸೌಭಾಗ್ಯ ನಮಗೆ ಒದಗಿತ್ತು. ಸ್ವಾವಲಂಬಿ ಬದುಕು ಕಟ್ಟಿಕೊಂಡು ಅನೇಕರಿಗೆ ಉದ್ಯೋಗವನ್ನು ಕೊಡಮಾಡಿದ ಸಾಧಕರೇ ಅಲ್ಲಿ ವಿರಾಜಮಾನರಾಗಿದ್ದು ವಿಶೇಷ. ಅವರೆಲ್ಲರ ಸಾಧನಾ ಫಲದ ಅನಾವರಣವೂ ನಡೆದಿತ್ತು. ಸೆಲ್ಕೋ ಕಂಪೆನಿಯನ್ನು ಕಟ್ಟಿ ಬೆಳೆಸಿದ ಹರೀಶ್ ಹಂದೆಯವರನ್ನು ಮುಖತಃ ಭೇಟಿ ಮಾಡುವ ತವಕವಿದ್ದರೂ ಸಾಧ್ಯವಾಗದೇ ಸಿಇಒ ಯವರಾದ ಮೋಹನ್ ಭಾಸ್ಕರ್‌ರವರನ್ನು ಮಾತನಾಡಿಸಿ ನಮ್ಮ ದಿವ್ಯಾಂಗತೆಯ ಬಗ್ಗೆ ವಿಶೇಷ ಕಾಳಜಿ ವಹಿಸಿ, ಸರಕಾರ ಸ್ಪಂದಿಸುವಂತೆ ಮಾಡಬೇಕೆಂಬ ಮನವಿಯನ್ನು ನೀಡಿದೆವು. ಪೂರಕವಾಗಿ ಸ್ಪಂದನ ದೊರೆತಿರುವುದು ಮುಂದಿನ ದಿನಗಳೇನಾದರೂ ಪರಿಣಾಮಗಳನ್ನು ನಿರೀಕ್ಷಿಸೋಣ.

ಈ ತಿಂಗಳು ನಮ್ಮ ಸಂಸ್ಥೆಯು ಎಫ್‌ಸಿಆರ್‌ಎ ಹೊಂದಲು ಎಸ್‌ಬಿಐ ಬ್ಯಾಂಕಿಗೆ ಖಾತೆಗಾಗಿ ಅರ್ಜಿ ಸಲ್ಲಿಸಲಾಯಿತು. 2024ರ ವರ್ಷ ತಮಗೆಲ್ಲರಿಗೂ ಶುಭ ತರಲಿ.

*ಸೇವಾ ಹೀ ಪರಮೋ ಧರ್ಮಃ*

ಇತೀ ತಮ್ಮವ,
**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫಿರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಸೇವಾಭಾರತಿಯ 19ನೇ ವರ್ಷದ ಸಂಭ್ರಮಾಚರಣೆ




**ಸೌತಡ್ಕ (ಡಿ.03):** ಸೇವಾಭಾರತಿ ಸಂಸ್ಥೆಯ 19ನೇ ವರ್ಷದ ಸಂಭ್ರಮ (2022–33) ಕೋಂಸ್ಕೋಪ್‌ನಿಂದ ಕೇಂದ್ರ ಮತ್ತು ಸಮುದಾಯಕ್ಕೆ ಉಪಕರಣಗಳ ಹಸ್ತಾಂತರ ಮತ್ತು ವಿಶ್ವ ವಿಕಲಚೇತನರ ದಿನಾಚರಣೆಯ ಸಂಭ್ರಮಾಚರಣೆಯ ಕಾರ್ಯಕ್ರಮವನ್ನು ಡಿಸೆಂಬರ್ 03 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಸೇವಾಭಾರತಿಯ ಖಜಾಂಚಿ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬೆಂಗಳೂರು ಕೋಂಸ್ಕೋಪ್ ಕಂಪನಿಯ ಸಾಫ್ಟ್‌ವೇರ್ ಇಂಜಿನಿಯರ್ ವಿಭಾಗದ ನಿರ್ದೇಶಕ ರಾದ ಶ್ರೀ ವೀರೇಂದ್ರ ಸಿಂಗ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬೆಂಗಳೂರು ಕೋಂಸ್ಕೋಪ್ ಕಂಪನಿಯ ಟ್ರೇಡ್ ಕಂಪ್ಲೆಯನ್ಸ್ ವಿಭಾಗದ ಸೀನಿಯರ್ ಮ್ಯಾನೇಜರ್ ಶ್ರೀ ನವೀನ್ ವಜ್ರವೇಲು ಉದ್ಘಾಟಕರ ನುಡಿಗಳನ್ನಾಡಿದರು.

ಬೆಂಗಳೂರು ಕೋಂಸ್ಕೋಪ್ ಕಂಪನಿಯ ಸಾಫ್ಟ್‌ವೇರ್ ಇಂಜಿನಿಯರ್ ವಿಭಾಗದ ಸೀನಿಯರ್ ಮ್ಯಾನೇಜರ್ ಶ್ರೀ ಮುರಳಿ ಜಯರಾಮನ್ ಸಂಸ್ಥೆಯ ಬಗ್ಗೆ ಶುಭನುಡಿಗಳನ್ನಾಡಿದರು.

ಕೋಂಸ್ಕೋಪ್ ಕಂಪನಿಯ ಬ್ಯುಸಿನೆಸ್ ಆಪರೇಷನ್ ವಿಭಾಗದ ಸೂಪರ್‌ವೈಸರ್ ಶ್ರೀ ಚೇತನ್ ಕಾರೆ ಕಾರ್ಯಕ್ರಮ ವನ್ನುದ್ದೇಶಿಸಿ ಮಾತನಾಡಿದರು. ಸೇವಾಧಾಮದ ಸಂಚಾಲಕರು ಶ್ರೀ ಪುರಂದರ ರಾವ್ ಸಂಸ್ಥೆಯ ಬಗ್ಗೆ ಹಿತ ನುಡಿಗಳನ್ನಾಡಿದರು. ಸೇವಾಭಾರತಿ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ ಅಧ್ಯಕ್ಷೀಯ ನುಡಿಗಳನ್ನಾಡಿದರು.

ಸೇವಾಭಾರತಿ ಕಾರ್ಯದರ್ಶಿ ಶ್ರೀ ಬಾಲಕೃಷ್ಣ 2022–23ರ ವಾರ್ಷಿಕ ವರದಿಯಲ್ಲಿನ ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸಿ ವಾರ್ಷಿಕ ವರದಿಯನ್ನು ಬಿಡುಗಡೆ ಮಾಡಿದರು.

ಕೆನರಾ ಬ್ಯಾಂಕ್ ಕೊಕ್ಕಡ ಶಾಖೆಯ ಮ್ಯಾನೇಜರ್ ಶ್ರೀ ಅಂಕಿತ್ ಸಿಂಗ್, ಉಡುಪಿ ಧಾನ್ಯಲಕ್ಷ್ಮೀ ರೈಸ್ ಮಿಲ್ ಮಾಲೀಕರು ಶ್ರೀ ಮಧ್ವಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕೋಂಸ್ಕೋಪ್ ಕಂಪನಿಯ ಸಿ.ಎಸ್.ಆರ್ ಯೋಜನೆಯಡಿ ಫಲಾನುಭವಿಗಳಿಗೆ 15 ಗಾಲಿಕುರ್ಚಿ, 5 ಗಾಳಿ ಹಾಸಿಗೆ, 5 ನೀರಿನ ಹಾಸಿಗೆ, 6 ಕಾಮಡೋ ಗಾಲಿಕುರ್ಚಿ, 1 ನ್ಯುಯೊ ಬೋಲ್ಸ್ ವಿತ್ ಫ್ಲೈ, 25 ಮೆಡಿಕಲ್ ಕಿಟ್ ಹಾಗೂ 50 ಸೆಲ್ಫ್ ಕೇರ್ ಕಿಟ್‌ಗಳನ್ನು ನೀಡಿದ್ದು, ಕಾರ್ಯಕ್ರಮದಲ್ಲಿ ಸಿ.ಎಸ್.ಆರ್ ಯೋಜನೆಯಡಿ ನೀಡಿದ ಗಾಲಿಕುರ್ಚಿ, ಮೆಡಿಕಲ್ ಕಿಟ್ ಹಾಗೂ ಸೆಲ್ಫ್‌ಕೇರ್ ಕಿಟ್‌ಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಯಿತು.

ಕಾರ್ಯಕ್ರಮವನ್ನು ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್. ಎಂ ಮತ್ತು ಡಾಕ್ಯುಮೆಂಟೇಷನ್ ಸಂಯೋಜಕಿ ಕು. ಅಪೂರ್ವ. ಪಿ.ವಿ ನಿರೂಪಿಸಿದರು. ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಸ್ವಾಗತಿಸಿ, ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಶ್ರೀ ಚರಣ್ ಕುಮಾರ್. ಎಂ ಧನ್ಯವಾದವಿತ್ತರು.

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸ್ಯೆಬಿಲಿಟಿ, ಬೆಂಗಳೂರು
ಎನ್.ಕೆ.ಜಿ.ಎಸ್.ಬಿ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಕುಮಟಾ
ಡಿಪಾರ್ಟ್‌ಮೆಂಟ್ ಆಫ್ ಇಂಗ್ಲೀಷ್ ಸ್ಟಡಿ ಅಂಡ್ ರೀಸರ್ಚ್, ಎಸ್.ಡಿ.ಯಂ, ಉಜಿರೆ

## ಮಹನೀಯ ದಾನಿಗಳು

ಶ್ರೀ ಗಣೇಶ್ ಕಲಾಯಿ, ಕೊಕ್ಕಡ
ಶ್ರೀ ಮಧ್ವಮೂರ್ತಿ ಪಿ, ಉಡುಪಿ
ಶ್ರೀ ಗಣೇಶ್ ಪಿ., ಕೊಕ್ಕಡ
ಶ್ರೀ ವಾಸುದೇವ ಎಸ್, ಕಡಬ
ಶ್ರೀ ಮನೋಜ್ ಕುಮಾರ್, ಬೆಂಗಳೂರು
ಶ್ರೀ ವಿ. ಗೋಪಾಲಕೃಷ್ಣಯ್ಯ, ಬೆಂಗಳೂರು
ಶ್ರೀ ಟಿ. ಕೃಷ್ಣಮೂರ್ತಿ ಕಲ್ಲೂರ್, ಬೆಂಗಳೂರು
ಶ್ರೀ ಎನ್. ಮೋಹನ್, ಬೆಂಗಳೂರು
ಶ್ರೀಮತಿ ಪದ್ಮಲತಾ, ಮೂಡಿಗೆರೆ
ಶ್ರೀ ಚಂದ್ರಶೇಖರ್, ನಿಡ್ಲೆ
ಶ್ರೀಮತಿ ಶ್ವೇತಾ ಜಿ. ಪೈ, ಬೆಂಗಳೂರು
ಶ್ರೀ ಶ್ಯಾಮ ಬಿ. ಅತ್ತಾಜೆ, ಉಜಿರೆ
ಕು. ಕೃತಿ ಯು. ಎಸ್., ಉಜಿರೆ
ಶ್ರೀ ಸಂದೀಪ್ ಶೆಟ್ಟಿ, ಉಜಿರೆ
ಶ್ರೀ ಉದಯಶಂಕರ ರೈ, ಬಂಟ್ವಾಳ
ಶ್ರೀ ಆರ್. ಎನ್. ಶ್ರೀನಿವಾಸ್, ತರೀಕೆರೆ
ಶ್ರೀ ರಜತ್ ರಾವ್, ಧರ್ಮಸ್ಥಳ
ಶ್ರೀ ಕೆ. ಪುರಂದರ ರಾವ್, ನಾರ್ಯ
ಶ್ರೀ ಹರಿಪ್ರಸಾದ್ ಆಚಾರ್ಯ, ಉಜಿರೆ
ಶ್ರೀಮತಿ ಜಯಂತಿ ಪುರಂದರ, ನಾರ್ಯ
ಶ್ರೀಮತಿ ಪದ್ಮಾವತಿ ಮಂಜುನಾಥ ಹೆಗ್ಡೆ
ಶ್ರೀ ಗೌರಿಶಂಕರ ರಾವ್, ಧರ್ಮಸ್ಥಳ

## ಸೇವಾನಿಧಿ ದಾನಿಗಳು

ಶ್ರೀ ಮಧ್ವಮೂರ್ತಿ ಪಿ, ಉಡುಪಿ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ರಾಮದಾಸ್ ಭಂಡಾರ್ಕರ್, ಉಜಿರೆ
ಶ್ರೀ ಉದಯಶಂಕರ್ ಕೆ., ಬೆಳ್ತಂಗಡಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಆನಂದ್ ಚಿನ್ನಪ್ಪ ಬೆಳವಟಗಿ, ಬೆಳಗಾವಿ
ಶ್ರೀಮತಿ ಛಾಯಾ ಸಿ. ಎಸ್, ಉಜಿರೆ
ಡಾ. ರಾಮಕೃಷ್ಣ ಜಿ. ಎನ್, ಕನ್ಯಾಡಿ
ಮಾಸ್ಟರ್ ಅದ್ವೈತ್ ವೈ, ಕನ್ಯಾಡಿ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ
ಶ್ರೀ ಮಧುಸೂದನ್, ಉಜಿರೆ
ಶ್ರೀ ಶಿವಕುಮಾರ್, ಉಜಿರೆ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಕು. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಅಮೃತ ಶಿಶು ನಿವಾಸ, ಬೆಂಗಳೂರು
ಶ್ರೀ ದೇವರಾಜ್ ಕೆ. ಎನ್, ಬೆಂಗಳೂರು
ರೈತಬಂಧು ಆಹಾರೋದ್ಯಮ ಪ್ರೈವೇಟ್ ಲಿಮಿಟೆಡ್, ಬೆಳ್ತಂಗಡಿ

## ಸೆಲ್ಕೋ ಕಂಪನಿಯ ಸಿ.ಇ.ಒ.ರಿಗೆ ಮನವಿ ಪತ್ರ ಸಲ್ಲಿಕೆ



**ಬೆಂಗಳೂರು :** ಸೆಲ್ಕೋ ಕಂಪನಿಯು "Symposium on Solar Energy Application" ಎಂಬ ಕಾರ್ಯಾಗಾರವನ್ನು ಡಿಸೆಂಬರ್ 16 ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದರು. ಸೆಲ್ಕೋ ಕಂಪನಿಯು ಆಯ್ದ ಸಂಘಸಂಸ್ಥೆಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಆಹ್ವಾನಿಸಿದ ಸಂಘಸಂಸ್ಥೆಗಳಲ್ಲಿ ಒಂದಾದ ಸೇವಾಭಾರತಿ ತಂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿತು.

ಸೇವಾಭಾರತಿಯ ಪ್ರತಿನಿಧಿಗಳಾಗಿ ಸೇವಾಭಾರತಿ ಖಜಾಂಚಿ ಶ್ರೀ ಕೆ.ವಿನಾಯಕ ರಾವ್ ಹಾಗೂ ಹಿರಿಯ ಕ್ಷೇತ್ರ ಸಂಯೋಜಕರಾದ ಶ್ರೀ ಮನು ಆರ್. ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀ ಕೆ.ವಿನಾಯಕ ರಾವ್ ಸೆಲ್ಕೋ ಕಂಪನಿ ಮುಖ್ಯ ಕಾರ್ಯನಿರ್ವಾಹಕರಾದ (ಸಿ.ಇ.ಒ) ಶ್ರೀ ಮೋಹನ್ ಭಾಸ್ಕರ್‌ರವರನ್ನು ಭೇಟಿ ಮಾಡಿ ಬೆನ್ನುಹುರಿ ದಿವ್ಯಾಂಗತೆಯ ಬಗ್ಗೆ ಸರಕಾರದೊಂದಿಗೆ ಚರ್ಚಿಸಿ, ಸರಕಾರ ಸ್ಪಂದಿಸುವಂತೆ ಮನವಿ ಸಲ್ಲಿಸಿ ವಿನಂತಿಸಲಾಯಿತು.

ಈ ಸಂದರ್ಭದಲ್ಲಿ ಸೆಲ್ಕೋ ಕಂಪನಿಯ ಏರಿಯಾ ಮ್ಯಾನೇಜರ್ ಸಂಜಿತ್ ರೈ ಉಪಸ್ಥಿತರಿದ್ದರು.

## ಡಿಸೆಂಬರ್ ತಿಂಗಳ ಸೇವಾ ಕಾರ್ಯಗಳು

1. ಗಾಲಿಕುರ್ಚಿ ವಿತರಣೆ – 11
2. ವಾಕರ್ ವಿತರಣೆ – 1
3. ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ – 13
4. ನೀರಿನ ಹಾಸಿಗೆ – 2
5. ಗಾಳಿ ಹಾಸಿಗೆ – 2

*The world worries about disability more than disabled people do*

# ಸೇವಾಧಾಮ ಪುನಶ್ಚೇತನ ಕೇಂದ್ರದ 5ನೇ ವಾರ್ಷಿಕೋತ್ಸವದ ಪ್ರಯುಕ್ತ ಬೃಹತ್ ರಕ್ತದಾನ ಶಿಬಿರ




ಸೇವಾಧಾಮ ಪುನಶ್ಚೇತನ ಕೇಂದ್ರದ 5 ನೇ ವಾರ್ಷಿಕೋತ್ಸವದ ಪ್ರಯುಕ್ತ ರೋಟರಿ ಸೇವಾಭಾರತಿ ಜೀವರಕ್ಷಕ್ ಯೋಜನೆ ಆಶ್ರಯದಲ್ಲಿ ಮಂಗಳೂರು ರಕ್ತನಿಧಿ ವಿಭಾಗದ ವೆನ್ಲಾಕ್ ಜಿಲ್ಲಾ ಸರಕಾರಿ ಆಸ್ಪತ್ರೆ ಸಹಕಾರದಲ್ಲಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೃಹತ್ ರಕ್ತದಾನ ಶಿಬಿರವು ಡಿಸೆಂಬರ್ 03 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪೂರ್ವಾಹ್ನ 10.00 ಗಂಟೆಗೆ ಜರುಗಿತು.

ಕಾರ್ಯಕ್ರಮದಲ್ಲಿ ರೋಟರಿ ಸೇವಾಭಾರತಿಯ ಸಂಯೋಜಕರು ರೊ. ಶ್ರೀಧರ್ ಕೆ.ವಿ. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಶ್ರೀ ಹರೀಶ್ ರಾವ್ ಎಂ. ಉದ್ಘಾಟಿಸಿ, ಉದ್ಘಾಟಕರ ನುಡಿಗಳನ್ನಾಡಿದರು. ಕೊಕ್ಕಡ ಆಡಳಿತ ವೈದ್ಯಾಧಿಕಾರಿಗಳು ಮತ್ತು ದಂತ ವೈದ್ಯಾಧಿಕಾರಿಗಳು ಡಾ. ತುಷಾರ ಕುಮಾರಿ ಸಂಸ್ಥೆಯು ತಮ್ಮ ಮಾತಿಗೆ ಒಪ್ಪಿ, ನಡೆಸುತ್ತಿರುವ ರಕ್ತದಾನ ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸೇವಾಭಾರತಿ ಅಧ್ಯಕ್ಷೆ ಶ್ರೀಮತಿ ಸ್ವರ್ಣಗೌರಿ ಅಧ್ಯಕ್ಷೀಯ ನುಡಿಗಳನ್ನಾಡಿದರು. ವೇದಿಕೆಯಲ್ಲಿ ಉಜಿರೆ ಹವ್ಯಕ ವಲಯದ ಅಧ್ಯಕ್ಷರಾದ ಶ್ರೀ ಶ್ಯಾಮ ಬಿ. ಅತ್ತಾಜೆ, ಭಾರತೀಯ ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಶ್ರೀ ಉದಯಶಂಕರ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ ಭಟ್, ಕೊಕ್ಕಡ ಶಿವಾಜಿ ಗ್ರೂಪ್ ಬಾಯ್ಸ್ ಅಧ್ಯಕ್ಷರಾದ ಶ್ರೀ ಕಿಶೋರ್, ಪಟ್ರಮೆ ವೀರಕೇಸರಿ ಅನಾರು ಅಧ್ಯಕ್ಷರು ಶ್ರೀಮೋಹನ್ ಗೌಡ ಅಶ್ವತ್ತಾಡಿ, ಕನ್ಯಾಡಿ ಫ್ರೆಂಡ್ಸ್ ಅಧ್ಯಕ್ಷರು ಶ್ರೀ ನವೀನ್ ಸುವರ್ಣ, ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರು ಶ್ರೀ ಕುಶಾಲಪ್ಪ ಗೌಡ ಉಪಸ್ಥಿತರಿದ್ದರು.

ಒಟ್ಟು 81 ಯುನಿಟ್ ರಕ್ತ ಸಂಗ್ರಹಿಸಲಾಯಿತು. ಕಾರ್ಯಕ್ರಮವನ್ನು ಸೇವಾಭಾರತಿ ಕ್ಷೇತ್ರ ಸಂಯೋಜಕರು ಶ್ರೀ ಶಶಾಂತ್ ನಿರೂಪಿಸಿದರು. ರೋಟರಿ ಸೇವಾಭಾರತಿ ಸಂಯೋಜಕರು ರೊ। ಶ್ರೀಧರ್ ಕೆ.ವಿ. ಸ್ವಾಗತಿಸಿ, ಸೇವಾಭಾರತಿ ಸೀನಿಯರ್ ಮ್ಯಾನೇಜರ್ ಚರಣ್ ಕುಮಾರ್ ಧನ್ಯವಾದವಿತ್ತರು.

ವ್ಯವಸ್ಥಾಪನಾ ಸಮಿತಿ, ಶ್ರೀ ಮಹಾಗಣಪತಿ ದೇವಸ್ಥಾನ ಸೌತಡ್ಕ, ಉಪ್ಪಿನಂಗಡಿ ಹವ್ಯಕ ಮಂಡಲ, ಉಜಿರೆ ವಲಯ, ಶಿವಾಜಿ ಗ್ರೂಪ್ ಬಾಯ್ಸ್, ಕೊಕ್ಕಡ, ಸೌತಡ್ಕ ಶ್ರೀ ಮಹಾಗಣಪತಿ ಸೇವಾಟ್ರಸ್ಟ್ (ರಿ.), ಕೊಕ್ಕಡ, ಕನ್ಯಾಡಿ ಫ್ರೆಂಡ್ಸ್ ಕ್ಲಬ್, ಕನ್ಯಾಡಿ, ವೀರಕೇಸರಿ ಅನಾರು ಪಟ್ರಮೆ, ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಕೊಕ್ಕಡ, ಕೇಸರಿ ಗೆಳೆಯರ ಬಳಗ ಕೊಕ್ಕಡ, ಸಮುದಾಯ ಆರೋಗ್ಯ ಕೇಂದ್ರ ಕೊಕ್ಕಡ ಶಿಬಿರದ ಯಶಸ್ಸಿಗೆ ಸಹಕರಿಸಿತು.

## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಧನಂಜಯ
ಪಟ್ರಮೆ



ಶ್ರೀ ಮಧುಸೂದನ್
ಉಜಿರೆ



ಶ್ರೀ ಪ್ರತಾಪ್ ಸಿಂಹ ನಾಯಕ್
ಉಜಿರೆ



ಶ್ರೀಮತಿ ಪದ್ಮಲತ
ಮೂಡಿಗೆರೆ



ಕು. ಕೃತಿ ಯು. ಎಸ್
ಉಜಿರೆ



ಶ್ರೀ ಸಮರ್ಥ್ ವಿ. ರಾವ್
ಬೆಂಗಳೂರು



ಶ್ರೀ ಗೌರಿಶಂಕರ್
ಧರ್ಮಸ್ಥಳ



ಶ್ರೀ ಕೆ. ಪುರಂದರ ರಾವ್
ದೊಂಡೋಲೆ



ಶ್ರೀ ರಜತ್ ರಾವ್
ಧರ್ಮಸ್ಥಳ

## ಗಾಲಿಕುರ್ಚಿ ವಿತರಣೆ




ಶ್ರೀ ಜಗದೀಶ್, ಕಾರವಾರ



ಶ್ರೀ ಮೊಹಮ್ಮದ್ ಆಸಿಫ್, ದಾಂಡೇಲಿ




ಶ್ರೀ ಸಂದೇಶ್, ಸಕಲೇಶಪುರ

*Life would be tragic if it weren't funny*

# ಸಿಬ್ಬಂದಿಗಳಿಗೆ ಒಂದು ದಿನದ ಕಾರ್ಯಾಗಾರ




**ಸೌತಡ್ಕ (ಡಿ.30):** ಸೇವಾಭಾರತಿ –ಸೇವಾಧಾಮವತಿಯಿಂದ, ಸಂಪನ್ಮೂಲ ವ್ಯಕ್ತಿಗಳಿಂದ ಸಿಬ್ಬಂದಿಗಳಿಗೆ ಒಂದು ದಿನದ ಕಾರ್ಯಾಗಾರ ಹಾಗೂ ಇಬ್ಬರು ಸಿಬ್ಬಂದಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಡಿಸೆಂಬರ್ 30 ರಂದು ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.


ಸೇವಾಧಾಮದಲ್ಲಿ ಫಿಸಿಯೋತೆರಪಿಸ್ಟ್ ಹಾಗೂ ಅಸಿಸ್ಟೆಂಟ್ ತೆರಫಿಸ್ಟ್ ಈವರೆಗೆ ಸೇವೆ ಸಲ್ಲಿಸಿ ಇನ್ನು ಮುಂದೆ ಉನ್ನತ ಶಿಕ್ಷಣಕ್ಕೆಂದು ತೆರಳುತ್ತಿರುವ ಕು. ಶೈಲಾ ಹಾಗೂ ಶ್ರೀಮತಿ ಪುಷ್ಪಲತಾ ಅವರನ್ನು ಸಂಸ್ಥೆಯಿಂದ ಗೌರವಿಸಿ ಬೀಳ್ಗೊಡಲಾಯಿತು. ಈ ಸಂಧರ್ಭದಲ್ಲಿ ಸೇವಾಭಾರತಿ ಸಲಹಾ ಮಂಡಳಿ ಸದಸ್ಯರಾದ ಡಾ. ಎ.ಜಯ ಕುಮಾರ್ ಶೆಟ್ಟಿ ಹಾಗೂ ರೊ. ಮನೋರಮ ಭಟ್, ಸೇವಾಭಾರತಿ ಹಿತೈಷಿಗಳಾದ ಶ್ರೀ ಪರಮೇಶ್ವರ್, ಸೇವಾಭಾರತಿ ಖಜಾಂಚಿ ಶ್ರೀ ಕೆ. ವಿನಾಯಕ ರಾವ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಂತರ ಸೇವಾಭಾರತಿ ಸಲಹಾ ಮಂಡಳಿ ಸದಸ್ಯರಾದ ಡಾ. ಎ. ಜಯಕುಮಾರ ಶೆಟ್ಟಿ ಹಾಗೂ ರೊ. ಮನೋರಮ ಭಟ್‌ರವರಿಂದ ಸಿಬ್ಬಂದಿಗಳಿಗೆ ವ್ಯಕ್ತಿತ್ವ ವಿಕಸನ ಹಾಗೂ ಮೌಲ್ಯಾಧಾರಿತ ಸಲಹೆಗಳನ್ನು ನೀಡಿದರು.

ಸಂಸ್ಥೆಯ ಕೊಡುಗೈ ದಾನಿಗಳಾದ ಶ್ರೀಮತಿ ಮತ್ತು ಶ್ರೀ ಯಶವಂತ ಪಟವರ್ಧನ ದಂಪತಿಗಳು ಸೇವಾ ಧಾಮಕ್ಕೆ ಭೇಟಿ ನೀಡಿ ತಮ್ಮ 29 ನೇ ವಿವಾಹ ವಾರ್ಷಿಕೋತ್ಸವದ ಸಂಭ್ರಮಾಚರಣೆಯ ಪ್ರಯುಕ್ತ ಸಂಸ್ಥೆಗೆ ದೇಣಿಗೆ ನೀಡುವುದರ ಮೂಲಕ ತಮ್ಮ ವಿವಾಹ ವಾರ್ಷಿಕೋತ್ಸವ ವನ್ನು ಆಚರಿಸಿದರು. ತದನಂತರ ಸೇವಾಧಾಮದ ಸನಿವಾಸಿಗಳೊಂದಿಗೆ ಮಾತನಾಡಿ ಶುಭ ಹಾರೈಸಿದರು.

ಅಪರಾಹ್ನದ ಬಳಿಕ ಸಿಬ್ಬಂದಿಗಳು ಹಾಗೂ ಸನಿವಾಸಿಗಳಿಗೆ ಮನೋರಂಜನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

## ಗಾಲಿಕುರ್ಚಿ ವಿತರಣೆ




ಶ್ರೀ ಮಹೇಶ್, ತರೀಕೆರೆ




ಶ್ರೀ ಸುರೇಶ್, ಉಡುಪಿ



ಶ್ರೀ ಡೀಕಯ್ಯ ಗೌಡ, ನಿಡ್ಲೆ



ಶ್ರೀ ಗಣೇಶ್, ಮಂಗಳೂರು



ಶ್ರೀಮತಿ ಶಾಂತ, ಹಾವೇರಿ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ



ನನ್ನ ಹೆಸರು ಜನಾರ್ಧನ ಗೌಡ. ನಾನು ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಗ್ರಾಮದಿಂದ ಬಂದಿರುತ್ತೇನೆ. ನಾನು ಮರದಿಂದ ಬಿದ್ದು ನನಗೆ T8 ಇಂಜ್ಯೂರಿಯಾಗಿರುತ್ತದೆ. ನಾನು ಮಂಗಳೂರು ಫಾದರ್ ಮುಲ್ಲರ್ ಕಂಕನಾಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ.

ನನಗೆ ಮನು ಸರ್ ಮನೆಗೆ ಭೇಟಿನೀಡಿ ಸೇವಾಧಾಮದ ಸಲಹೆ ನೀಡಿರುತ್ತಾರೆ. ಆಮೇಲೆ ಸೇವಾಧಾಮಕ್ಕೆ 25/10/2023 ರಂದು ಬಂದಿರುತ್ತೇನೆ. ಒಂದು ತಿಂಗಳು 20 ದಿವಸ ತೆರಪಿಯನ್ನು ನಮಗೆ ಒಳ್ಳೆಯ ರೀತಿಯಲ್ಲಿ ಮಾಡಿಸಿದ್ದಾರೆ. ಆದ್ದರಿಂದ ನಾನು ಪುನಶ್ಚೇತನಗೊಂಡಿದ್ದೇನೆ. ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುವುದನ್ನು ಹೇಳಿಕೊಟ್ಟಿದ್ದಾರೆ. ಹಾಗೂ ನನಗೆ ಮುಂದೆ ಬರುವ ಸಮಸ್ಯೆಗಳ ಬಗ್ಗೆ ಇಲ್ಲಿ ಅರಿವು ಮೂಡಿಸಿರುತ್ತಾರೆ. ಇದೆಲ್ಲದಕ್ಕೂ ಅವಕಾಶ ಮಾಡಿಕೊಟ್ಟ ಸೇವಾಭಾರತಿ ಅಧ್ಯಕ್ಷರು, ಸಂಸ್ಥಾಪಕರು, ಕಾರ್ಯದರ್ಶಿ ಹಾಗೂ ಸಿಬ್ಬಂದಿವರ್ಗದವರಿಗೆ ನನ್ನಧನ್ಯವಾದಗಳು ಧನ್ಯವಾದಗಳೊಂದಿಗೆ

**– ಜನಾರ್ಧನ ಗೌಡ, ಬೆಳ್ತಂಗಡಿ**


## ವಾಕರ್ ವಿತರಣೆ




ಶ್ರೀ ಮಹೇಶ್, ತರೀಕೆರೆ

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ



ಡಿಸೆಂಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಕೆ. ವಿ. ರಾಜಣ್ಣ, ನಿವೃತ್ತ ರಾಜ್ಯ ಆಯುಕ್ತರು, ಅಂಗವಿಕಲ ಹಕ್ಕುಗಳ ಅಧಿನಿಯಮ, ಕರ್ನಾಟಕ, ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸರಕಾರದಿಂದ ಲಭ್ಯವಿರುವ ವಿವಿಧ ಸೌಕರ್ಯಗಳ ಕುರಿತು ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 50 ಮಂದಿ ಭಾಗವಹಿಸಿದ್ದರು.

## ನಿಮಗಿದು ತಿಳಿದಿರಲಿ

### ಮಲಬದ್ಧತೆಯ ನಿರ್ವಹಣಾ ವಿಧಾನ

- ಮಲವಿಸರ್ಜನೆಗೆ ಅರ್ಧಗಂಟೆಗೆ ಮುನ್ನ ಸುಮಾರು 200 ಮಿ.ಲಿ. ಬಿಸಿನೀರನ್ನು ಕುಡಿಯುವುದು, ನಾರಿನಂಶವಿರುವ ಆಹಾರ ಪದಾರ್ಥಗಳನ್ನು ಮತ್ತು ಹಸಿರು ತರಕಾರಿಗಳನ್ನು ತಪ್ಪದೇ ಸೇವಿಸುವುದು. ಉದಾ: ಸೊಪ್ಪು, ಹುರುಳಿಕಾಯಿ, ನುಗ್ಗೆಕಾಯಿ, ಕ್ಯಾರೆಟ್, ಮೂಲಂಗಿ, ಬೇಳೆಕಾಳುಗಳು, ಮೊಳಕೆ ಕಾಳುಗಳು)
- ಊಟದ ನಂತರ ಬಾಳೆಹಣ್ಣನ್ನು ತಪ್ಪದೇ ಸೇವಿಸಬೇಕು. ನೀರನ್ನು ಹೆಚ್ಚಾಗಿ ಕುಡಿಯಬೇಕು, ಮದ್ಯಪಾನ ಮತ್ತು ದೂಮಪಾನಗಳನ್ನು ಸೇವಿಸಬಾರದು.
- ಸಮಯ ಪಾಲನೆ ಮಾಡುವುದರ ಮೂಲಕ ದಿನಕ್ಕೊಮ್ಮೆ ಮಲವಿಸರ್ಜನೆ ಮಾಡುವುದು, ಸ್ಟಿಮುಲೇಷನ್ (ಮಲಹೋಗುವ ಸ್ಥಳದಲ್ಲಿ ಕೈಬೆರಳಿನಿಂದ ಮುಟ್ಟುವುದರ ಮೂಲಕ) ಕೈಚೀಲಗಳನ್ನು ಬಳಸುವುದು.
- ಎನಿಮಾ ಮತ್ತು ಸಪೋಸ್ಟರೀಸ್ ಮಾತ್ರೆಗಳನ್ನು ಬಳಸುವುದರ ಮೂಲಕ ವಿಸರ್ಜನೆ ಮಾಡಬಹುದು.
- ಸುಗಮ ಮಲವಿಸರ್ಜನೆಗೆ ಪಾಶ್ಚಿಮಾತ್ಯ ಶೌಚಾಲಯದ ಅಥವಾ ಎತ್ತರವಾದ ಕುರ್ಚಿಗಳನ್ನು ಬಳಸುವುದು ಅನುಕೂಲಕರ.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ ಕಿಟ್‌ಗಳು.

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

## Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗನ ಕೈಹಿಡಿದ ಮೀನು ವ್ಯಾಪಾರ



**ದಿನವಿಡೀ ಕ್ಯಾಂಟೀನ್, ಎಲೆಕ್ಟ್ರಿಷಿಯನ್ ಹಾಗೂ ಅಡುಗೆ ಕೆಲಸ ಮಾಡಿ ದುಡಿದು ರಾತ್ರಿ ಶಾಲೆಯಲ್ಲಿ ಓದಿ ಎಲೆಕ್ಟ್ರೀಷಿಯನ್ ವೃತ್ತಿ ಆರಂಭಿಸಿದ ಕೆಲ ದಿನಗಳ ನಂತರ ಬೆನ್ನುಹುರಿ ಅಪಘಾತ ಗೊಂಡರೂ ಶಶಿಧರ್ ಮುಂಡ್ಕೂರು ಧೃತಿಗೆಡದೆ ಸ್ನೇಹಿತರ ಆಶಯದಂತೆ ಸ್ಕೂಟರ್ ಓಡಿಸುತ್ತಿರುವುದು, ಮೀನು ವ್ಯಾಪಾರ ಮಾಡಿ ಸ್ವಾವಲಂಬಿ ಜೀವನ ನಡೆಸುತ್ತಿರುವುದು ಅನೇಕ ದಿವ್ಯಾಂಗರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.**

ಜೀವನವೆಂಬಸೋಲು–ಗೆಲುವಿನ ಆಟದಲ್ಲಿ ಗೆದ್ದು ವಿಧಿಯಾಟದಿಂದ ಸೋತರೂ ಮತ್ತೆ ಛಲಬಿಡದೆ ತ್ರಿವಿಕ್ರಮನಂತೆ ಗೆಲುವಿನತ್ತ ನಡೆದು 3 ವರ್ಷದಿಂದ ಮೀನು ಮಾರಾಟದ ಮುಖಾಂತರ ಸ್ವಉದ್ಯೋಗ ಪ್ರಾರಂಭಿಸಿ, ಇವರ ಪ್ರಾಮಾಣಿಕ ಹಾಗೂ ಉತ್ಸಾಹಿಕ ಕೆಲಸಕ್ಕೆ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಕ್ಷೇತ್ರದಲ್ಲಿ 2023ರಲ್ಲಿ ಪ್ರಶಸ್ತಿ ಪಡೆದ ಬೆನ್ನುಹುರಿ ಅಪಘಾತಕ್ಕೊಳಗಾದ ಶಶಿಧರ್ ಮುಂಡ್ಕೂರು ಅವರ ಯಶೋಗಾಥೆ ನಿಮ್ಮ ಮುಂದೆ.

ಶಶಿಧರ್ ಪೂಜಾರಿ ಮೂಲತಃ ಉಡುಪಿ ಜಿಲ್ಲೆಯ ಮುಂಡ್ಕೂರು ಅಂಚೆಯ ಪದಬೆಟ್ಟು ಮನೆ ನಿವಾಸಿ. ತಂದೆ ರಾಮ ಪೂಜಾರಿ ಹಾಗೂ ತಾಯಿ ದೇವಕಿ ಪೂಜಾರಿಯ ದ್ವಿತೀಯ ಪುತ್ರನಾಗಿ 1975 ಜುಲೈ 01 ರಂದು ಜನಿಸಿದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಂಡ್ಕೂರು ಸರಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ಮನೆಯಲ್ಲಿ ಆರ್ಥಿಕವಾಗಿ ಕಷ್ಟವಿದ್ದ ಕಾರಣ ಮುಂದಿನ ಶಿಕ್ಷಣವನ್ನು ಮುಂದುವರೆಸಲು ತಮ್ಮ ಅತ್ತೆಯೊಂದಿಗೆ ಮುಂಬೈಗೆ ತೆರಳಿದರು. ತಮ್ಮ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣವನ್ನು ಸರಸ್ವತಿ ನೈಟ್ ಸ್ಕೂಲ್ ಮುಂಬೈಯಲ್ಲಿ ಮುಂದುವರೆಸಿದರು. ದಿನವಿಡೀ ಕ್ಯಾಂಟೀನ್, ಎಲೆಕ್ಟ್ರಿಷಿಯನ್ ಹಾಗೂ ಅಡುಗೆ ಕೆಲಸ ಮಾಡಿ ದುಡಿದು ರಾತ್ರಿಯ ಹೊತ್ತಿನಲ್ಲಿ ಶಾಲೆಗೆ ಓದಲು ತೆರಳುತ್ತಿದ್ದರು.

ತಮ್ಮ ಎಸ್.ಎಸ್.ಎಲ್.ಸಿ ಶಿಕ್ಷಣದ ನಂತರ ಎಲೆಕ್ಟ್ರಿಷಿಯನ್ ಕೆಲಸವನ್ನು ತಮ್ಮ ಉದ್ಯೋಗವನ್ನಾಗಿಸಿಕೊಂಡರು. ಮುಂಬೈಯ ಆಸುಪಾಸಿನಲ್ಲಿ ಮನೆಮನೆಗೆ ತೆರಳಿ ಕೆಲಸ ಮಾಡುತ್ತಿದ್ದರು. ಹೀಗೆ ಜೀವನ ಸಾಗಿಸುತ್ತಾ 2009 ರಲ್ಲಿ ತಮ್ಮ ವೈವಾಹಿಕ ಜೀವನವನ್ನು ಪ್ರಾರಂಭಿಸಿದರು. ಹೀಗೆ ಚಿಕ್ಕ ಸಂಸಾರದೊಂದಿಗೆ ಜೀವನ ಸಾಗಿಸುತ್ತಾ ಬದುಕು ಸಾಗಿಸುತ್ತಿದ್ದ ಸಂಧರ್ಭದಲ್ಲಿ ಒಂದು ದುರಂತ ಸಂಭವಿಸಿತು.

2011 ಡಿಸೆಂಬರ್ 23 ರಂದು ಮುಂಬೈಯ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಸಂಧರ್ಭದಲ್ಲಿ ಮೇಲಿನಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದರು. ತದನಂತರ 15 ದಿನಗಳ ಕಾಲ ಮುಂಬೈಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು.

ಚಿಕಿತ್ಸೆ ಪಡೆದ ಬಳಿಕ ವೈದ್ಯರು ಮೊದಲಿನಂತೆ ನಡೆಯಲು ಸಾಧ್ಯವೆಂದು ಸುಳ್ಳು ಭರವಸೆ ನೀಡಿದರು. ಆದರೆ ಗಾಲಿಕುರ್ಚಿಯ ಸಹಾಯವಿಲ್ಲದೆ ಇವರಿಗೆ ನಡೆದಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಮುಂದಿನ ಚಿಕಿತ್ಸೆಗೆಂದು ಶಿಕಾರಿಪುರ, ಕೊಕ್ಕಡ, ಆಳ್ವಾಸ್ ಆಸ್ಪತ್ರೆಯಲ್ಲಿ ಆಯುರ್ವೇದ ಹಾಗೂ ಎಣ್ಣೆಚಿಕಿತ್ಸೆ ಮಾಡಿದರು. ಆದರೆ ಯಾವುದೇ ಹೆಚ್ಚಿನ ಬದಲಾವಣೆಯಾಗಲಿಲ್ಲ. ಹೀಗೆ ಜೀವನ ಸಾಗಿಸುತ್ತಾ ಜೀವನದಲ್ಲಿ ಎಲ್ಲಾ ಭರವಸೆ ಕಳೆದುಕೊಂಡಾಗ ಅದೃಷ್ಟ ಲಕ್ಷ್ಮಿಯಂತೆ ಒಂದು ಹೆಣ್ಣು ಮಗುವಿಗೆ ಜನ್ಮವಿತ್ತರು.

2020 ರಲ್ಲಿ ಟಿ.ಎಂ. ಪೈ. ಆಸ್ಪತ್ರೆಯಲ್ಲಿ ಸೇವಾಭಾರತಿಯ ವತಿಯಿಂದ 2 ದಿನಗಳ ಕಾಲ ನಡೆದ ಉಚಿತ ವಸತಿಯುತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡರು. ಶಿಬಿರದಲ್ಲಿ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್‌ರವರನ್ನು ಭೇಟಿ ಮಾಡಿದರು. ಶಿಬಿರದಲ್ಲಿ ಪಾಲ್ಗೊಂಡು ವಿನಾಯಕ ರಾವ್‌ರವರಿಂದ ಮೌಲ್ಯಾಧಾರಿತ ಸಲಹೆಗಳನ್ನು ಪಡೆದುಕೊಂಡರು.

ಸೇವಾಭಾರತಿ ವತಿಯಿಂದ ಗಾಲಿಕುರ್ಚಿ, ವಾಕರನ್ನು ಪಡೆದಿರುತ್ತಾರೆ. 2015 ರಲ್ಲಿ ಸರಕಾರದಿಂದ ದೊರೆಯುವ ತ್ರಿಚಕ್ರವಾಹನವನ್ನು ಪಡೆದುಕೊಂಡು, ರೆಟ್ರೋಫಿಟ್ಟೆಡ್ ಸ್ಕೂಟರನ್ನು ಚಲಾಯಿಸುತ್ತಾರೆ.

ಹೀಗೆ ಮುಂದೆ ಜೀವನೋಪಾಯಕ್ಕೆ ಏನಾದರೂ ಉದ್ಯೋಗ ಮಾಡಬೇಕೆಂದು ಯೋಚಿಸುತ್ತಿದ್ದ ಸಂಧರ್ಭದಲ್ಲಿ ತಮ್ಮ ಸ್ನೇಹಿತ ಸೆಲ್ವರಾಜ್‌ರವರ ಸಲಹೆಯಂತೆ ಮೀನು ಮಾರಾಟ ಮಾಡಲು ಪ್ರಾರಂಭಿಸಿದರು. ಇವರು ತಮ್ಮ ರೆಟ್ರೋಫಿಟ್ಟೆಡ್ ಸ್ಕೂಟರ್‌ನಲ್ಲಿ ಬೆಳ್ಮಣ್ಣು ಹಾಗೂ ಮುಂಡ್ಕೂರು ಗ್ರಾಮದಲ್ಲಿ ಮೀನು ಮಾರಾಟ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ಮೀನು ಮಾರಾಟದಿಂದ ಮಾಸಿಕವಾಗಿ 3,000 ದಷ್ಟು ಸಂಪಾದನೆ ಮಾಡುತ್ತಿದ್ದಾರೆ.

ಇವರಿಗೆ 2023ರಲ್ಲಿ ವಿಶ್ವ ವಿಕಲಚೇತನರ ದಿನಾಚರಣೆಯ ಪ್ರಯುಕ್ತ ಉಡುಪಿ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರೀಕರ ಇಲಾಖೆಯಿಂದ ನಡೆಸಿದ ಕಾರ್ಯಕ್ರಮದಲ್ಲಿ ಇವರ ಪ್ರಾಮಾಣಿಕ ಹಾಗೂ ಉತ್ಸಾಹಿಕ ಕೆಲಸಗಳನ್ನು ಗುರುತಿಸಿ ಸನ್ಮಾನ ಪಡೆದುಕೊಂಡು ಪ್ರಶಸ್ತಿಗೆ ಭಾಜನರಾಗಿದ್ದಾರೆ.